# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 13.12.2010**

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ ವತಿಯಿಂದ ದಿನಾಂಕ: 13.12.2010 ರಂದು ಬೆಳಿಗ್ಗೆ 10.00 ಗಂಟೆಗೆ ಜಂಟಿ ಆಯುಕ್ತರು (ಪಶ್ಚಿಮ) ವಲಯಕ್ಕೆ ಭೇಟಿ ನೀಡಿ ಸಂಬಂಧಪಟ್ಟ ಕಛೇರಿಗಳನ್ನು ತಪಾಸಣೆ ಮಾಡಿದ್ದು, ತಪಾಸಣೆ ಸಮಯದಲ್ಲಿ ಕಛೇರಿಗಳಲ್ಲಿನ ಹಾಜರಾತಿ ಪುಸ್ತಕಗಳನ್ನು ಪರಿಶೀಲಿಸಲಾಯಿತು. ಬಹುತೇಕ ಕಛೇರಿಗಳಲ್ಲಿ ಸಿಬ್ಬಂದಿಗಳ ಹಾಜರಾತಿ ಶೇಕಡ 69 ರಷ್ಟಿದ್ದು, ಶೇಕಡ 75 ರಷ್ಟು ಸಿಬ್ಬಂದಿಗಳು ಗುರುತಿನ ಚೀಟಿಯನ್ನು ಮತ್ತು ಗ್ರೂಪ್ ಡಿ ನೌಕರರು ಸಮವಸ್ತ್ರಗಳನ್ನು ಧರಿಸಿರುವುದು ಕಂಡುಬಂದಿರುತ್ತದೆ ಎಂದು ಅಧ್ಯಕ್ಷರಾದ ಶ್ರೀ ಲಕ್ಷ್ಮೀಕಾಂತ ರೆಡ್ಡಿ ರವರು ತಿಳಿಸಿದ್ದಾರೆ.

ಜಂಟಿ ಆಯುಕ್ತರು (ಪಶ್ಚಿಮ) ವಲಯಕ್ಕೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿ (ರಾಜಾಜಿನಗರ) ದಲ್ಲಿ ಶ್ರೀ ಕೆ. ಕದಿರಪ್ಪ, ಮೌಲ್ಯಮಾಪಕರು, ಶ್ರೀ ಗಿರಿಯಪ್ಪ, ಕಂದಾಯ ವಸೂಲಿಗಾರರು ದಿನಾಂಕ: 06.12.2010 ರಿಂದ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡದೇ ಇರುವುದು ಪರಿಶೀಲನೆ ವೇಳೆಯಲ್ಲಿ ಕಂಡುಬಂದಿರುತ್ತದೆ ಹಾಗೂ ಶ್ರೀ ಎಂ. ವೇದಮೂರ್ತಿ, ಕಂದಾಯ ವಸೂಲಿಗಾರರು ಇವರು ದಿನಾಂಕ: 13.10.2010 ರಿಂದ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವುದಿಲ್ಲ. ಆದರೂ ಸದರಿ ನೌಕರರಿಗೆ ವೇತನ ಪಾವತಿಯಾಗಿರುವುದಾಗಿ ತಿಳಿದುಬಂದಿರುತ್ತದೆ. ಈ ಸಂಬಂಧ ಸಹಾಯಕ ಕಂದಾಯ ಅಧಿಕಾರಿಯಾದ ಶ್ರೀಮತಿ ಲಕ್ಷ್ಮಮ್ಮನವರನ್ನು ವಿಚಾರಿಸಲಾಗಿ, ಹಾಜರಾತಿ ಸಲ್ಲಿಸದೇ ಇರುವ ನೌಕರರು ಸರ್ವೇ ಕಾರ್ಯದಲ್ಲಿ ತೊಡಗಿರುವುದರಿಂದ, ಕಛೇರಿಗೆ ಹಾಜರಾಗಿ ಹಾಜರಾತಿ ಹಾಕಲು ಸಾಧ್ಯವಾಗಿರುವುದಿಲ್ಲ. ಅವರುಗಳು ಸಂಬಂಧಪಟ್ಟ ವಾರ್ಡ್ ಕಛೇರಿಗಳಲ್ಲಿ ಹಾಜರಾತಿಯನ್ನು ಸಲ್ಲಿಸಿರುತ್ತಾರೆಂದು ವಿವರಣೆ ನೀಡಿರುತ್ತಾರೆ. ಈ ಬಗ್ಗೆ ಅಧ್ಯಕ್ಷರು ಮತ್ತು ಸದಸ್ಯರು ಪರಿಶೀಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.

ಜಂಟಿ ಆಯುಕ್ತರು (ಪಶ್ಚಿಮ) ವಲಯಕ್ಕೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸಲು ಸಿಬ್ಬಂದಿ ಕೊರತೆ ಇರುವುದಾಗಿ, ಸದರಿ ಕಛೇರಿಗೆ ವರ್ಗಾವಣೆಗೊಂಡ ಸಿಬ್ಬಂದಿಯನ್ನು ಬೇರೆ ಇಲಾಖೆಗೆ ನಿಯೋಜಿಸಿದ್ದು, ಇದರಿಂದ ಕಛೇರಿ ಕೆಲಸ ಕಾರ್ಯಗಳಿಗೆ ತುಂಬಾ ತೊಂದರೆಯಾಗುತ್ತಿದ್ದು, ಈ ಸಂಬಂಧ ಮೇಲಾಧಿಕಾರಿಗಳಿಗೆ ಪತ್ರ ಬರೆದಿರುವುದಾಗಿ ಆರೋಗ್ಯ ಅಧಿಕಾರಿ ಡಾ॥ ದೇವಕಿ ಉಮೇಶ್ ತಿಳಿಸಿರುತ್ತಾರೆ.

ಜಂಟಿ ಆಯುಕ್ತರು (ಪಶ್ಚಿಮ) ವಲಯದ ನಿಯಂತ್ರಣ ಕೊಠಡಿಯಲ್ಲಿನ ದೂರುಗಳ ಪುಸ್ತಕವನ್ನು ಪರಿಶೀಲಿಸಲಾಯಿತು. ಇಲ್ಲಿ ಎರಡು ಪ್ರಹರಿ ವಾಹನಗಳಿದ್ದು, ಎರಡು ವಾಹನಗಳು ದುಸ್ಥಿತಿಯಲ್ಲಿರುವುದಾಗಿ ಮತ್ತು ಸದರಿ ವಾಹನಗಳ ಚಾಲಕರು ಲಾಗ್ ಪುಸ್ತಕಗಳನ್ನು ನಿರ್ವಹಿಸದೇ ಇದ್ದು, ಇಂಧನ ಹಾಕಿಸುವುದರಲ್ಲಿ ವ್ಯತ್ಯಾಸ ಇರುವುದು ಕಂಡುಬಂದಿರುತ್ತದೆ.

ನಂತರ ಸದರಿ ಸಮಿತಿಯವರು ಜಂಟಿ ಆಯುಕ್ತರು (ಪಶ್ಚಿಮ)ಕ್ಕೆ ಸಂಬಂಧಿಸಿದ ಮತ್ತು ಪೂರ್ವ ವಲಯಕ್ಕೆ ಸಂಬಂಧಿಸಿದ ಸಹಾಯಕ ಕಂದಾಯ ಅಧಿಕಾರಿ (ವಸಂತನಗರ) ಕ್ವೀನ್ಸ್ ರಸ್ತೆಯಲ್ಲಿರುವ ಕಛೇರಿಗೆ ಭೇಟಿ ನೀಡಿ, ಎಲ್ಲಾ ಕಛೇರಿಗಳ ಹಾಜರಾತಿ ಪುಸ್ತಕಗಳನ್ನು ಪರಿಶೀಲಿಸಲಾಯಿತು. ಸದರಿ ಕಟ್ಟಡದಲ್ಲಿ ಕಂದಾಯ ಅಧಿಕಾರಿ (ಹೆಬ್ಬಾಳ), ಸಹಾಯಕ ಕಂದಾಯ ಅಧಿಕಾರಿ (ಹೆಬ್ಬಾಳ, ಕಾಡುಗೊಂಡನಹಳ್ಳಿ, ಜೆ.ಸಿ.ನಗರ ಮತ್ತು ಪುಲಿಕೇಶಿನಗರ) ಕಛೇರಿಗಳು ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿದುಬಂದಿದ್ದು, ಈ ಕಟ್ಟಡದಲ್ಲಿ ಶೌಚಾಲಯ ನಿರ್ವಹಣೆ ಹಾಗೂ ಯಾವುದೇ ರೀತಿಯ ಮೂಲಸೌಲಭ್ಯವಿಲ್ಲದೆ ಇರುವುದು ಕಂಡುಬಂದಿರುತ್ತದೆ. ಕಛೇರಿ ಕಟ್ಟಡವನ್ನು ಕೂಡ ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲ. ಕಛೇರಿ ಆವರಣದಲ್ಲಿ ಎಲ್ಲೆಂದರಲ್ಲಿ ಅಲಮಾರಗಳನ್ನು ಇಟ್ಟಿದ್ದು, ಇದರಿಂದ ಕಛೇರಿಯ ವಾತಾವರಣಕ್ಕೆ ಧಕ್ಕೆ ಆಗುತ್ತಿರುವುದಲ್ಲದೆ ಕಛೇರಿಯ ದಾಖಲಾತಿಗಳನ್ನು ಸರಿಯಾಗಿ ನಿರ್ವಹಿಸದಿರುವುದು ಪರಿಶೀಲನೆ ವೇಳೆಯಲ್ಲಿ ಕಂಡುಬಂದಿರುತ್ತದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯವರು ಕಂದಾಯ ಅಧಿಕಾರಿ (ಹೆಬ್ಬಾಳ) ರವರ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸ್ವೀಕೃತಿ ವಿಭಾಗದಲ್ಲಿ ಯಾವ ಸಿಬ್ಬಂದಿಯು ಕಾರ್ಯನಿರ್ವಹಿಸದೇ ಇರುವುದು ಕಂಡುಬಂತು. ನಾವು ಪರಿಶೀಲಿಸಲು ಒಳಗೆ ಹೋದಾಗ ಅಲ್ಲಿಗೆ ನಾಲ್ಕನೇ ದರ್ಜೆ ನೌಕರರಾದ ಶ್ರೀ ಕೆ. ಮಹಾಲಿಂಗರವರು ಬಂದು ತಾವು ಸದರಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿದರು. ಇದರ ಬಗ್ಗೆ ಸಂಬಂಧಪಟ್ಟ ಕಂದಾಯ ಅಧಿಕಾರಿಯವರನ್ನು ವಿಚಾರಿಸಲಾಗಿ, ಅವರು ತಮ್ಮ ಕಛೇರಿಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದರಿಂದ ನಾಲ್ಕನೆ ದರ್ಜೆ ನೌಕರರನ್ನು ಅಲ್ಲಿಗೆ ನೇಮಿಸಿದ್ದು, ಅವನು ಕಡತವನ್ನು ಸ್ವೀಕರಿಸುವುದು ಮತ್ತು ಸ್ಟ್ಯಾಂಪ್‌ಡ್ಯೂಟಿಯ 2% ಡಿ.ಡಿ.ಗಳನ್ನು ತೆಗೆದುಕೊಳ್ಳುವುದಾಗಿ ತಿಳಿಸಿದರು. ಕಂದಾಯ ಅಧಿಕಾರಿ (ಹೆಬ್ಬಾಳ) ರವರು ಕಛೇರಿಯಲ್ಲಿದ್ದರೂ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡದಿರುವುದು ಕಂಡುಬಂದಿರುತ್ತದೆ. ಬಹುತೇಕ ಕಛೇರಿಗಳಲ್ಲಿ ಬಟವಾಡೆ ಅಧಿಕಾರಿಗಳು ಹಾಜರಾತಿ ಪುಸ್ತಕವನ್ನು ಪರಿಶೀಲಿಸದೇ ಸಹಿ ಮಾಡಿರುವುದು ಕಂಡುಬರುತ್ತದೆ. ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಈ ಎಲ್ಲಾ ಲೋಪದೋಷಗಳನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿರುತ್ತಾರೆ.

ತಪಾಸಣೆ ಸಂದರ್ಭದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀಕಾಂತರೆಡ್ಡಿ, ಸದಸ್ಯರುಗಳಾದ ಶ್ರೀ ಆರ್. ಚಂದ್ರಶೇಖರಯ್ಯ, ಶ್ರೀ ಪಿಳ್ಳಪ್ಪ. ಎಂ.ಇ., ಶ್ರೀ ಮೋಹನ್ ಕುಮಾರ್, ಶ್ರೀ ಮುರುಗೇಶ್ ಮೊದಲಿಯಾರ್, ಶ್ರೀಮತಿ ಫೌಜೀಯ ಬೇಗಂ, ಶ್ರೀಮತಿ ವಸಂತಕುಮಾರಿ, ಶ್ರೀಮತಿ ಸುಮಿತ್ರಾ ವಿಜಯಕುಮಾರ್, ಶ್ರೀಮತಿ ಲಲಿತಾ ಮುಕುಂದರಾವ್ ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***<u>ಪತ್ರಿಕಾ ಪ್ರಕಟಣೆ</u>*** **ದಿನಾಂಕ: 13.12.2010**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜರಾಜೇಶ್ವರಿನಗರ ವಲಯದ ಹಲಗೇವಡೇರಹಳ್ಳಿ ಕೆರೆ ಅಭಿವೃದ್ಧಿ ಮತ್ತು ಪುನರುಜ್ಜೀವನಗೊಳಿಸಲು ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಇಂದು ಆದೇಶಿಸಿದರು.

ಈ ವಲಯದಲ್ಲಿ ಇದು ಒಂದು ಐತಿಹಾಸಿಕ ಕೆರೆಯಾಗಿದ್ದು, ಅನೇಕ ವರ್ಷಗಳಿಂದ ಕೊಳಚೆ ನೀರು ಕೆರೆಗೆ ಸೇರಿಕೊಂಡು ನಿರ್ಲಕ್ಷ್ಯಕ್ಕೆ ಒಳಗಾಗಿರುತ್ತದೆ. ಮತ್ತು ಸುತ್ತಲು ಕೆರೆಯ ಅಂಚಿನಲ್ಲಿ ಹಾಗೂ ಕೆರೆಯ ಏರಿ ಮೇಲಿದ್ದ ತಂತಿಬೇಲಿಯನ್ನು ಕಿತ್ತುಹಾಕಲಾಗಿದೆ. ಈ ಕೆರೆಯ ಸಂಪೂರ್ಣ ಅಭಿವೃದ್ಧಿ ಮತ್ತು ಪುನರುಜ್ಜೀವನಗೊಳಿಸಲು ಸಮಗ್ರ ಯೋಜನೆಗೆ ಅನುಮೋದನೆ ನೀಡಿದ್ದಾರೆ.

ಪಾಲಿಕೆಯ ಆಯುಕ್ತರು ಇಂದು ರಾಜರಾಜೇಶ್ವರಿನಗರ ವಲಯದ ತಪಾಸಣೆ ಕೈಗೊಂಡು ನಂತರ ಅಧಿಕಾರಿಗಳೊಂದಿಗೆ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದರು. ಈ ವಲಯದ ಮೈಸೂರು ರಸ್ತೆಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಪರಿಶೀಲಿಸಿ, ವೈಜ್ಞಾನಿಕವಾಗಿ ಮತ್ತು ಗುಣಮಟ್ಟದಿಂದ ಕೂಡಿಲ್ಲವಾದ್ದರಿಂದ ಅದನ್ನು ಕೂಡಲೇ ಸಂಬಂಧಪಟ್ಟ ಗುತ್ತಿಗೆದಾರರಿಂದ ಮತ್ತೆ ಸರಿಯಾದ ರೀತಿಯಲ್ಲಿ ಮುಚ್ಚಿಸಲು ಕ್ರಮ ಜರುಗಿಸುವಂತೆ ಮುಖ್ಯ ಅಭಿಯಂತರರಿಗೆ ಆದೇಶ ನೀಡಿದರು.

ಈ ವಲಯದಲ್ಲಿ ಈಗಾಗಲೇ 64 ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಅದರಲ್ಲಿ ಸುಮಾರು 5 ಪಾರ್ಕ್‌ಗಳಲ್ಲಿ ಅವುಗಳಲ್ಲಿ ಕೈಗೊಂಡಿರುವ ಮಳೆ ನೀರು ಕೋಯ್ಲು ಕಾಮಗಾರಿಯನ್ನು ವೀಕ್ಷಿಸಿದರು. ಪಾಲಿಕೆಯ ಎಲ್ಲಾ ಉದ್ಯಾನವನಗಳಲ್ಲಿ ಕಡ್ಡಾಯವಾಗಿ ಮಳೆ ನೀರು ಕೋಯ್ಲು ಮತ್ತು ಸಾವಯವ ಗೊಬ್ಬರವನ್ನು ತಯಾರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸಂಬಂಧಪಟ್ಟ ತೋಟಗಾರಿಕೆ ಅಧೀಕ್ಷಕರಿಗೆ ಸೂಚನೆ ನೀಡಿದರು. ಎಲ್ಲಾ ಉದ್ಯಾನವನಗಳಲ್ಲಿ ಹೆಚ್ಚಿನ ಮರ-ಗಿಡಗಳನ್ನು ನೆಟ್ಟು ಟ್ರೀಪಾರ್ಕ್‌ಗಳನ್ನಾಗಿ ಪರಿವರ್ತಿಸಲು ಸೂಚಿಸಿದರು.

ಅಧೀಕ್ಷಕ ಅಭಿಯಂತರರಿಗೆ ಸೂಚನೆ ನೀಡಿ, ರಾಜರಾಜೇಶ್ವರಿನಗರ ವ್ಯಾಪ್ತಿಯಲ್ಲಿ ಬರುವ ಸಮುದಾಯ ಭವನ, ಶಾಲಾ-ಕಾಲೇಜುಗಳು, ಮಾಲ್‌ಗಳು, ವಾಣಿಜ್ಯ ಸಂಕೀರ್ಣಗಳಲ್ಲಿ ಒಣ ಕಸ ಸಂಗ್ರಹಣೆ ಮತ್ತು ವಿಂಗಡಣೆ ಕೇಂದ್ರಗಳನ್ನು ಸ್ಥಾಪಿಸಲು ತಿಳಿಸಿದರು. ಇದರಿಂದ ಕಸದಲ್ಲಿ ಬರುವ ಪ್ಲಾಸ್ಟಿಕ್, ಬಾಟಲ್‌ಗಳು ಮುಂತಾದ ಬೇರ್ಪಡಿಸಬಹುದಾದ ವಸ್ತುಗಳನ್ನು ಮೂಲದಲ್ಲಿಯೇ ವಿಂಗಡಿಸಿ, ಡಂಪಿಂಗ್ ಯಾರ್ಡ್‌ಗಳ ಮೇಲೆ ಆಗುವ ಒತ್ತಡವನ್ನು ಕಡಿಮೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಆಸ್ತಿ ತೆರಿಗೆ ಸಂಗ್ರಹಣೆ ಕುರಿತು ಪರಿಶೀಲನೆ ನಡೆಸಿ, ರೂ.59 ಕೋಟಿ ಗುರಿ ಹೊಂದಿದ್ದು, ಸುಮಾರು ರೂ.38 ಕೋಟಿ ಆಸ್ತಿ ತೆರಿಗೆ ಸಂಗ್ರಹಣೆಯಾಗಿದೆ. ಇನ್ನೂ 45 ಸಾವಿರ ಆಸ್ತಿಗಳು ತೆರಿಗೆ ಜಾಲಕ್ಕೆ ಸೇರಬೇಕಾಗಿರುತ್ತದೆ. ಇವುಗಳನ್ನು ತೆರಿಗೆ ಜಾಲಕ್ಕೆ ತರುವುದರಿಂದ ಮತ್ತು ಆಸ್ತಿ ತೆರಿಗೆ ಘೋಷಣೆ ಸಮಯದಲ್ಲಿ ತಪ್ಪು ಮಾಹಿತಿ ನೀಡುವ ಪರಿಶೀಲನೆಯಿಂದ ಇನ್ನೂ ರೂ.40 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಲಿದೆ ಎಂದು ಪಾಲಿಕೆಯ ಆಯುಕ್ತರು ತಿಳಿಸಿದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 13.12.2010**

## ***ಪಾಲಿಕೆಯ ವ್ಯಾಪ್ತಿಯ ಕೊಳಚೆ ಪ್ರದೇಶಗಳಿಗೆ ಉಪ ಮಹಾಪೌರರ ಭೇಟಿ***

ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉಪ ಮಹಾಪೌರರಾದ ಶ್ರೀ ಎನ್.ದಯಾನಂದ್ ರವರು ಗೋವಿಂದರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ನಾಗರಭಾವಿ ವಾರ್ಡ್‌ನಲ್ಲಿರುವ ಅರುಂಧತಿ ನಗರ ಕೊಳಚೆ ಪ್ರದೇಶಕ್ಕೆ ಸ್ಥಳಿಯ ಪಾಲಿಕೆ ಸದಸ್ಯರಾದ ಶ್ರೀ ಕೆ.ಉಮೇಶ್ ಶೆಟ್ಟಿರವರೊಂದಿಗೆ ತಪಾಸಣೆಯನ್ನು ಕೈಗೊಂಡು ಪರಿಶೀಲಿಸಿದರು.

ಕೊಳಚೆ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ 22.75 ಯೋಜನೆಯಡಿಯಲ್ಲಿ 470 ಕೋಟಿ ರೂ.ಗಳ ಹಣವಿದ್ದು ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಪಾಲಿಕೆಯ ವ್ಯಾಪ್ತಿಯ ಎಲ್ಲಾ ಕೊಳಚೆ ಪ್ರದೇಶಗಳಲ್ಲಿ ಶೌಚಾಲಯ, ವಸತಿ ನಿರ್ಮಾಣ, ಕುಡಿಯುವ ನೀರು ಹಾಗೂ ವಿದ್ಯುತ್ ಸರಬರಾಜು ಸೇರಿದಂತೆ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಈ ಹಣವನ್ನು ಉಪಯೋಗಿಸಲಾಗುವುದೆಂದು ತಿಳಿಸಿದರು.

ಅರುಂಧತಿ ನಗರ ಸ್ಲಂ ನಿವಾಸಿಗಳಿಗೆ ತೀವ್ರವಾದ ನೀರಿನ ಸಮಸ್ಯೆ, ಶೌಚಾಲಯ, ಮೋರಿಗಳ ನಿರ್ಮಾಣದಂತಹ ಅನೇಕ ಮೂಲಭೂತ ಸೌಕರ್ಯಗಳ ಕೊರತೆಯಿರುವುದರಿಂದ ಕೂಡಲೇ ಅವುಗಳನ್ನು ಒದಗಿಸಿ ಕೊಡಲು ಕ್ರಮ ಕೈಗೊಳ್ಳುವಂತೆ ದಕ್ಷಿಣ ವಲಯದ ಮುಖ್ಯ ಅಭಿಯಂತರರಾದ ಶ್ರೀ ಅನಂತಸ್ವಾಮಿ ರವರಿಗೆ ಉಪ ಮಹಾಪೌರರು ಸೂಚಿಸಿದರು.

ಕಳೆದ 17 ವರ್ಷಗಳಿಂದ ಸ್ಲಂನಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಕೂಡಲೇ ಹಕ್ಕು ಪತ್ರಗಳನ್ನು ವಿತರಿಸಲು ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಠ ಪಂಗಡದವರಿಗೆ 22.75 ಯೋಜನೆಯಡಿಯಲ್ಲಿ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು. ಅಲ್ಲದೇ ಈ ಯೋಜನೆಯಡಿಯಲ್ಲಿ ನಿರ್ಮಿಸಿರುವ ಒಂಟಿ ಮನೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಹೊಯ್ಸಳ ನಗರ ಹಾಗೂ ನಾಯಂಡಹಳ್ಳಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಪಡಿತರ ಚೀಟಿ, ಹಕ್ಕುಪತ್ರ, ರಸ್ತೆಗಳ ನಿರ್ಮಾಣ, ಮೋರಿಗಳ ನಿರ್ಮಾಣದಂತಹ ಮುಂತಾದ ಮೂಲಭೂತ ಸೌಕರ್ಯಗಳ ಕುರಿತಾದ ಮನವಿಗಳನ್ನು ಸ್ವೀಕರಿಸಿ ಕೂಡಲೇ ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಹಾಗೂ ಒತ್ತುವರಿಯಾದ ಪಾಲಿಕೆಯ ಆಸ್ತಿಗಳನ್ನು ಪರಿಶೀಲಿಸಿ, ಕೂಡಲೇ ಅವುಗಳನ್ನು ವಶಪಡಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವಂತೆ ಅಭಿಯಂತರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ನಾಯಂಡಹಳ್ಳಿ ಪಾಲಿಕೆ ಸದಸ್ಯರಾದ ಶ್ರೀಮತಿ ಹೆಚ್.ಎಸ್.ರಾಜೇಶ್ವರಿ, ಕಾರ್ಯಪಾಲಕ ಅಭಿಯಂತರರಾದ ಶ್ರೀ ಗುರುನಾಥ್ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ಮಹಾದೇವ್ ಮತ್ತು ಸ್ಥಳೀಯ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** ದಿನಾಂಕ: 13.12.2010

## ***ಸಾರ್ವಜನಿಕ ಸ್ಥಳ ವಿರೂಪಗೊಳಿಸುವವರ ವಿರುದ್ಧ ಪಾಲಿಕೆ ಕಾರ್ಯಾಚರಣೆ***

ಸಾರ್ವಜನಿಕ ಸ್ಥಳಗಳಲ್ಲಿ ಚಲನಚಿತ್ರದ ಭಿತ್ತಿ ಪತ್ರಗಳನ್ನು ಅಂಟಿಸಿ ವಿರೂಪಗೊಳಿಸುವವರ ವಿರುದ್ಧ ಪಾಲಿಕೆಯು ಕಾರ್ಯಾಚರಣೆ ಮುಂದುವರೆಸಿದ್ದು, ದಿನಾಂಕ: 30.11.2010 ರಂದು ಮತ್ತೆ ಇಬ್ಬರು ನಿರ್ಮಾಪಕರ ಮೇಲೆ ಕಾಟನ್‌ಪೇಟೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಚಿಕ್ಕಪೇಟೆ ಉಪ ವಿಭಾಗದ ಸಹಾಯಕ ಪರಿಸರ ಅಧಿಕಾರಿ ತಮ್ಮ ವ್ಯಾಪ್ತಿಯಲ್ಲಿ ಬರುವ ಕಾಟನ್‌ಪೇಟೆ ಮುಖ್ಯರಸ್ತೆ ಲೀಲಾ ಪ್ಯಾರಡೈಸ್, ಡಿಲೀಕ್ಸ್ ಲಾಡ್ಜ್ ಎದುರು ಗಲ್ಲಿ ಗೋಡೆಯ ಮೇಲೆ "ಯಕ್ಷ" ಮತ್ತು "ಗಾನಬಜಾನ" ಚಲನಚಿತ್ರ ಭಿತ್ತಿಪತ್ರಗಳನ್ನು ಅಂಟಿಸಿ, ಸಾರ್ವಜನಿಕ ಸ್ಥಳಗಳನ್ನು ವಿರೂಪಗೊಳಿಸಿದ್ದಕ್ಕಾಗಿ Karnataka Open Place (Prevention of Disfigurement) Act 1981 ಅಡಿಯಲ್ಲಿ ಕಾನೂನಿನ ರೀತ್ಯಾ ಕಾಟನ್‌ಪೇಟೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿರುತ್ತದೆ ಎಂದು ಮುಖ್ಯ ಅಭಿಯಂತರರು (ಪಶ್ಚಿಮ) ವಲಯ ರವರು ತಿಳಿಸಿದ್ದಾರೆ.

1) ಕಾಟನ್‌ಪೇಟೆ ಮುಖ್ಯರಸ್ತೆ ಲೀಲಾ ಪ್ಯಾರಡೈಸ್, ಡಿಲೀಕ್ಸ್ ಲಾಡ್ಜ್ ಎದುರು ಗಲ್ಲಿ ಗೋಡೆಯ ಮೇಲೆ "ಯಕ್ಷ" ಮತ್ತು "ಗಾನಬಜಾನ" ಚಲನಚಿತ್ರದ ಭಿತ್ತಿಪತ್ರವನ್ನು ಅಂಟಿಸಿರುತ್ತಾರೆ.
   ಹೆಸರು: ಟಿ.ಪಿ. ಸಿದ್ದರಾಜು ಹಾಗೂ ಪ್ರಶಾಂತ್ ರಾಜ್ ನಿರ್ಮಾಪಕರುಗಳು, ವಿಳಾಸ: C/o ಚಲನಚಿತ್ರ ವಾಣಿಜ್ಯ ಮಂಡಳಿ, ನಂ.28, 1ನೇ ಮುಖ್ಯರಸ್ತೆ, ಕ್ರೆಸೆಂಟ್ ರಸ್ತೆ, ಹೈಗ್ರೌಂಡ್ಸ್,ಬೆಂಗಳೂರು-01.

ಈ ಮೇಲ್ಕಂಡ ನಿರ್ಮಾಪಕರ ವಿರುದ್ಧ ಕಾಟನ್‌ಪೇಟೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**